# ಶ್ರೀರಾಮಕೃಷ್ಣ ವಚನವೇದದಿಂದ



## ಭಗವದ್ದರ್ಶನ

ವಿಷಯಬುದ್ಧಿ ಲೇಶಮಾತ್ರವಿದ್ದರೂ ಭಗವಂತನ ದರ್ಶನ ದೊರೆಯುವುದಿಲ್ಲ. ಬೆಂಕಿಕಡ್ಡಿ ಒದ್ದೆಯಾಗಿತ್ತು ಎಂದರೆ ಒಂದು ಸಾವಿರ ಕಡ್ಡಿ ಗೀಚು, ಒಂದೂ ಹೊತ್ತಿಕೊಳ್ಳುವುದಿಲ್ಲ. ಕೇವಲ ಒಂದು ರಾಶಿ ಬೆಂಕಿಕಡ್ಡಿಯ ನಷ್ಟ, ಅಷ್ಟೇ. ವಿಷಯಾಸಕ್ತ ಮನಸ್ಸು ನೆನೆದ ಬೆಂಕಿಕಡ್ಡಿ. ಒಮ್ಮೆ ಶ್ರೀಮತಿ (ರಾಧೆ) ತನ್ನ ಸಖಿಯರಿಗೆ ಹೇಳಿದಳು, ತನ್ನ ಕಣ್ಣಿಗೆ ಎಲ್ಲವೂ ಕೃಷ್ಣಮಯವಾಗಿ ಕಾಣುತ್ತಿದೆ ಎಂಬುದಾಗಿ. ಸಖಿಯರು ಹೇಳಿದರು: "ಎಲ್ಲಿ, ನಮಗೆ ಹಾಗೆ ಕಾಣುತ್ತಿಲ್ಲವಲ್ಲ! ನಿನಗೇನು ಬುದ್ಧಿಭ್ರಮಣೆಯಾಗಿದೆಯೇ?" ಶ್ರೀಮತಿ ಹೇಳಿದಳು: "ಸಖಿಯರೆ, ಅನುರಾಗವೆಂಬ ಅಂಜನವನ್ನು ಕಣ್ಣಿಗೆ ಹಚ್ಚಿಕೊಳ್ಳಿ. ಆಗ ನಿಮಗೆ ಆತ ಕಾಣುತ್ತಾನೆ."

ಚಿತ್ತಶುದ್ಧಿ ಆಗದೆ ಇತ್ತು ಎಂದರೆ, ಭಗವದ್ದರ್ಶನ ಪಡೆಯಲಾಗುವುದಿಲ್ಲ. ಕಾಮಕಾಂಚನಾಸಕ್ತಿಯಿಂದ ಮನಸ್ಸು ಮಲಿನವಾಗಿಬಿಟ್ಟಿದೆ—ಕೊಳೆಯಿಂದ ತುಂಬಿದೆ. ಸೂಜಿ ಮಣ್ಣಿನಿಂದ ಆವೃತವಾಗಿದ್ದರೆ ಆಗ ಸೂಜಿಕಲ್ಲು ಅದನ್ನು ಎಳೆಯಲಾರದು. ಆ ಮಣ್ಣನ್ನು ತೊಳೆದುಬಿಟ್ಟಿದ್ದೇ ಆದರೆ ಒಡನೆ ಸೂಜಿಕಲ್ಲು ಅದನ್ನು ಎಳೆದುಬಿಡುತ್ತದೆ. ಅದೇ ರೀತಿ ಮನಸ್ಸಿನ ಕೊಳಕನ್ನು ಕಣ್ಣೀರಿನಿಂದ ತೊಳೆದುಬಿಡಬಹುದು. ಯಾರೇ ಆಗಲಿ, "ಹೇ ಭಗವಂತ, ಮತ್ತೆ ನಾನು ಅಂಥ ಕಾರ್ಯಗಳನ್ನು ಮಾಡುವುದಿಲ್ಲ," ಅಂತ ಹೇಳಿ ಅನುತಾಪದಿಂದ ಅತ್ತದ್ದೇ ಆದರೆ, ಕೊಳೆ ತೊಳೆದುಹೋಗುತ್ತದೆ. ಆಗ ಭಗವದ್ರೂಪದ ಸೂಜಿಗಲ್ಲು ಮನಸ್ಸೆಂಬ ಸೂಜಿಯನ್ನು ಎಳೆದುಕೊಂಡುಬಿಡುತ್ತದೆ. ಆಗ ಭಗವಂತನ ದರ್ಶನ ದೊರೆಯುತ್ತದೆ.

ಭಗವಂತನ ದರ್ಶನವಾದೊಡನೆ ವಿಚಾರ ನಿಂತು ಹೋಗುತ್ತದೆ. ಆದರೆ ಕೆಲಕೆಲವರು ಭಗವಂತನ ದರ್ಶನವಾದ ಮೇಲೂ ವಿಚಾರದಲ್ಲಿ ತೊಡಗುವುದುಂಟು. ಮತ್ತೆ ಕೆಲವರು ಭಕ್ತರಾಗಿಯೇ ಉಳಿದು ಆತನ ನಾಮಗುಣಕೀರ್ತನೆ ಮಾಡುವುದುಂಟು.

ಮಗು ಎಷ್ಟು ಹೊತ್ತಿನವರೆಗೆ ಅಳುತ್ತದೆ? ಹಾಲು ದೊರೆಯುವವರೆಗೆ. ಅದು ದೊರೆತ ಒಡನೇ ಅಳು ಎಲ್ಲ ನಿಂತುಹೋಗಿಬಿಡುತ್ತದೆ. ಬಳಿಕ ಸ್ತನ್ಯಪಾನದಿಂದ ದೊರಕುವ ಆನಂದದಿಂದ ಹಿಗ್ಗುತ್ತದೆ. ಆದರೆ ಇದೂ ನಿಜ; ಕುಡಿಯುತ್ತ ಕುಡಿಯುತ್ತ ಇದ್ದ ಹಾಗೆ ಒಮ್ಮೊಮ್ಮೆ ಆಟವಾಡುವುದು, ನಗುವುದು.

ಎಲ್ಲವೂ ಭಗವಂತನೇ ಆಗಿದ್ದಾನೆ. ಆದರೆ ಆತ ಮನುಷ್ಯನಲ್ಲಿ ವಿಶೇಷವಾಗಿ ವ್ಯಕ್ತವಾಗಿದ್ದಾನೆ. ಯಾರಲ್ಲಿ ಬಾಲಕನಂಥ ಶುದ್ಧ ಹೃದಯವಿದೆಯೋ, ಯಾರು ಪ್ರೇಮೋನ್ಮತ್ತನಾಗಿ ನಗುವನೋ, ಅಳುವನೋ, ನರ್ತಿಸುವನೋ, ಹಾಡುವನೋ ಅಂಥವನಲ್ಲಿ ಭಗವಂತ ತಾನೇ ಸಾಕ್ಷಾತ್ತಾಗಿ ಇರುತ್ತಾನೆ.

ಭಗವಂತನ ದರ್ಶನ ದೊರೆಯಿತು ಎಂದರೆ ಮನುಷ್ಯ ಆನಂದ ಪರವಶನಾಗಿಬಿಡುತ್ತಾನೆ, ಮೂಕನಾಗಿಬಿಡುತ್ತಾನೆ. ಯಾರು ತಾನೆ ಸುದ್ದಿ ಸಮಾಚಾರ ಕೊಡಬಲ್ಲರು? ಯಾರು ತಾನೆ ವಿವರಿಸಬಲ್ಲರು?

ರಾಜ ವಾಸಿಸುವುದು ಏಳು ಹೆಬ್ಬಾಗಿಲುಗಳ ಆಚೆ. ಪ್ರತಿಯೊಂದು ಬಾಗಿಲ ಹತ್ತಿರವೂ ಒಬ್ಬ ದೊಡ್ಡ ಐಶ್ವರ್ಯವಂತ ಕುಳಿತಿರುತ್ತಾನೆ. ಪ್ರತಿಯೊಂದು ಬಾಗಿಲ ಹತ್ತಿರವೂ ಶಿಷ್ಯ ಗುರುವನ್ನು ಕೇಳುತ್ತಾನೆ: "ರಾಜ ಈತನೇ ಏನು?" ಗುರು ಹೇಳುತ್ತಾನೆ: "ಅಲ್ಲ, ನೇತಿ, ನೇತಿ,"; ಶಿಷ್ಯ ಏಳನೇ ಬಾಗಿಲ ಹತ್ತಿರ ಹೋದಾಗ, ಆತನ ಕಣ್ಣಿಗೆ ಒಂದು ದೃಶ್ಯ ಬೀಳುವುದು. ಅದನ್ನು ನೋಡಿ, ಒಮ್ಮೆಗೇ ದಂಗು ಬಡಿದವನಾಗಿ "ರಾಜ ಈತನೇ?"—ಎಂಬುದಾಗಿ ಕೇಳಬೇಕಾಗಿಲ್ಲ. ದರ್ಶನ ಮಾತ್ರದಿಂದಲೇ ಸಮಸ್ತ ಸಂದೇಹಗಳೂ ನಿವೃತ್ತಿಯಾಗುತ್ತವೆ.

ಭಗವಂತನ ದರ್ಶನ ದೊರೆತರೆ ಎಲ್ಲ ಸಂದೇಹಗಳೂ ನಿವೃತ್ತಿಯಾಗಿಬಿಡುತ್ತವೆ. ಆಗ ಅನುಕೂಲವಾದ ಗಾಳಿ ಬೀಸಲಾರಂಭಿಸುತ್ತದೆ. ಭಕ್ತ ನಿಶ್ಚಿಂತನಾಗಿಬಿಡುತ್ತಾನೆ. ಅನುಕೂಲವಾದ ಗಾಳಿ ಬೀಸುವಾಗ ಯಾವ ರೀತಿ ಅಂಬಿಗ ನೌಕಾಪಟವನ್ನು ಬಿಚ್ಚಿ ಚುಕ್ಕಾಣಿ ಹಲಗೆಯನ್ನು ನೆಪಮಾತ್ರಕ್ಕೆ ಹಿಡಿದುಕೊಂಡು ನಿಶ್ಚಿಂತೆಯಿಂದ ಕುಳಿತು ಹುಕ್ಕ ಸೇದುತ್ತಾನೊ, ಆ ರೀತಿಯಾಗಿ ಭಕ್ತ ನಿಶ್ಚಿಂತನಾಗಿ ಬಿಡುತ್ತಾನೆ.

ಭಗವಂತನ ದರ್ಶನ ದೊರೆತಮೇಲೂ ಕೆಲವರ ಶರೀರ ಸ್ವಲ್ಪ ಕೆಲಸಗಳಿಗಾಗಿ—ಲೋಕ ಶಿಕ್ಷಣಕ್ಕಾಗಿ ಉಳಿದುಕೊಂಡಿರುತ್ತದೆ. ಗಂಗಾಸ್ನಾನದಿಂದ ಪಾಪ ಹೋಗಿ ಮುಕ್ತಿ ದೊರೆಯುತ್ತದೆ. ಆದರೆ ಕುರುಹು ಮಾತ್ರ ಹೋಗುವುದಿಲ್ಲ. ಆದರೆ ಇದು ನಿಜ, ಹಿಂದಿನ ಪಾಪಕರ್ಮಗಳ ಫಲಭೋಗವನ್ನು ಅನುಭವಿಸಲು ಎಷ್ಟು ಜನ್ಮಗಳನ್ನು ಎತ್ತಬೇಕಾಗಿತ್ತೊ, ಅವನ್ನು ಮತ್ತೆ ಎತ್ತಬೇಕಾಗಿರುವುದಿಲ್ಲ. ಯಾವ ಕರ್ಮಗಳ ದೆಸೆಯಿಂದ ಪ್ರಸ್ತುತ ಶರೀರ ಉದ್ಭವವಾಯಿತೊ, ಅವು ಮುಗಿಯುವವರೆಗೆ ಮಾತ್ರ ಅದು ಬದುಕಿಕೊಂಡಿರುತ್ತದೆ; ಉಳಿದ ಜನ್ಮಗಳನ್ನು ಮತ್ತೆ ಎತ್ತಬೇಕಾಗಿರುವುದಿಲ್ಲ. ಕಾಮ ಕ್ರೋಧಾದಿಗಳೆಲ್ಲ ಸುಟ್ಟು ಭಸ್ಮವಾಗಿಬಿಡುತ್ತವೆ. ಶರೀರ ಮಾತ್ರ ಉಳಿದುಕೊಂಡಿರುತ್ತದೆ, ಇನ್ನು ಸ್ವಲ್ಪ ಕಾಲ—ಕೆಲವು ಕಾರ್ಯಗಳನ್ನು ಮುಗಿಸಲು.

ವಿಜ್ಞಾನಿ ಸತತ ಭಗವದ್ದರ್ಶನ ಮಾಡುತ್ತಿರುತ್ತಾನೆ. ಅದಕ್ಕೇ ಆತನಿಗೆ ಈ ಜಗತ್ತಿನ ಕಡೆ ಉದಾಸೀನಭಾವ. ಈ ಕಣ್ಣುಗಳನ್ನು ತೆರೆದುಕೊಂಡೇ ಆತನ ದರ್ಶನ ಮಾಡುತ್ತಾನೆ. ಕೆಲವು ವೇಳೆ ನಿತ್ಯದಿಂದ ಲೀಲೆಗೆ ಇಳಿದು ಬರುತ್ತಾನೆ, ಇನ್ನು ಕೆಲವು ವೇಳೆ ಲೀಲೆಯಿಂದ ನಿತ್ಯಕ್ಕೆ ಹತ್ತಿಹೋಗುತ್ತಾನೆ. *